Compulsory Education.

Q.—410. Sri H. T. PUTTAPPA (Hoskote-Anekal-Scheduled Castes).—

Will the Government be pleased to state :—

(*a*) whether they intend to introduce compulsory education ;

(*b*) if so, when it would be introduced ?

A.—Sri A. G. RAMACHANDRA RAO (Minister for Law and Education).—

(*a*) Compulsory Education has already been initiated.

(*b*) Does not arise in view of reply to clause (*a*).

ಶ್ರೀ ಎಚ್. ಟಿ. ಪುಟ್ಟಪ್ಪ.—ಈಗ ನಮ್ಮ ಸಂಸ್ಥಾನದಲ್ಲಿ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆಯೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಇದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಯಾವ ಯಾವ ತಾಲ್ಲೂಕಿನಲ್ಲಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರತಿಯೊಂದು ಜಿಲ್ಲೆಯ ಒಂದೊಂದು ತಾಲ್ಲೂಕಿನಲ್ಲೂ ಇದು ಜಾರಿಯಲ್ಲಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಬಾಕಿ ಕಡೆಗಳಲ್ಲಿ ಇದನ್ನು ಯಾವಾಗ ಜಾರಿಗೆ ತರುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಣದ ಅಭಾವದಿಂದ ನಿಲ್ಲಿಸಲಾಗಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಬೆಂಗಳೂರು ಜಿಲ್ಲೆಯಲ್ಲಿ ಯಾವ ತಾಲ್ಲೂಕಿನಲ್ಲಿ ಇದನ್ನು ಜಾರಿಗೆ ತರಲಾಗಿದೆ ?

Sri A. G. RAMACHANDRA RAO.—I will give the information.

Mr. SPEAKER.—The answer can be furnished to the Hon'ble Member.

Sri A. G. RAMACHANDRA RAO.—Yes.

Rural Housing Co-operative Societies (Loans granted).

Q.—125. Sri D. R. KARI GOWDA (Hassan).—

Will the Government be pleased to state :—

(*a*) the amount so far granted as loan for Rural Housing Co-operative Societies during the year 1955-1956 ;

(*b*) how many societies are granting loans for rural housing purposes and in which districts ?

A.—Dr. R. NAGAN GOWDA (Minister for Agriculture).—

(*a*) Nil so far.

(*b*) Does not arise.

ಶ್ರೀ ಡಿ. ಆರ್. ಕರಿಗೌಡ.—ಮೈಸೂರು ಡೇಶದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಸಹಾಯ ನೀಡುವ ಎಷ್ಟು ಪರಸ್ಪರ ಸಹಾಯಕ ಸಂಘಗಳು ರಿಜಿಸ್ಟರ್‌ಆಗಿವೆ ?

*ಡಾ॥ ಆರ್. ನಾಗನಗೌಡ.—ಈಗಾಗಲೆ 23 ಸೊಸೈಟಿಗಳು ರಿಜಿಸ್ಟರ್‌ಆಗಿವೆ. ಇನ್ನೂ 3 ಸೊಸೈಟಿಗಳು ರಿಜಿಸ್ಟರ್ ಆಗುವುದರಲ್ಲಿವೆ.

ಶ್ರೀ ಡಿ. ಆರ್. ಕರಿಗೌಡ.—ಈ 23 ಸೊಸೈಟಿಗಳಲ್ಲಿ ಎಷ್ಟು ಸಾಲ ಕೇಳಿವೆ ?

ಡಾ ॥ ಆರ್. ನಾಗನಗೌಡ.—ಇತ್ತೀಚೆಗೆ ನಾವು ಹೌಸ್ ಬಿಲ್ಡಿಂಗ್ ಸೊಸೈಟಿಗಳಿಗೆ ಸಾಲ ಕೊಡತಕ್ಕ ಬಗ್ಗೆ 2 ಲಕ್ಷ ರೂಗಳನ್ನು ತೆಗೆದಿಟ್ಟಿದ್ದೇವೆ.

ಶ್ರೀ ಡಿ. ಆರ್. ಕರಿಗೌಡ.—55-56ನೆಯ ಸಾಲನಲ್ಲಿ ಈ ಬಾಬಿಗೆ ತಾವೇಕೆ ದುಡ್ಡನ್ನು ಒದಗಿಸಲಿಲ್ಲ ?

ಡಾ ॥ ಆರ್. ನಾಗನಗೌಡ.—ಈ ರೂರಲ್ ಹೌಸಿಂಗ್ ಸೊಸೈಟಿಗಳು ಈಗೀಗ ಹೊಸದಾಗಿ ಪ್ರಾರಂಭವಾಗಿವೆ. ಈ ಯೋಜನೆಗಾಗಿಯೇ ನಾವೀಗ 2 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ.

ಶ್ರೀ ಡಿ. ಆರ್. ಕರಿಗೌಡ.—ಈ 2 ಲಕ್ಷ ರೂಪಾಯಿಗಳು ಒಂದು ತಾಲ್ಲೂಕಿಗೂ ಕೂಡ ಸಾಕಾಗುವುದಿಲ್ಲ ಎಂಬುದು ತಮಗೆ ಗೊತ್ತಿದೆಯೆ ?

ಡಾ ॥ ಆರ್. ನಾಗನಗೌಡ.—ಸಾಕಾಗುವುದಿಲ್ಲ ಎನ್ನುವುದು ನಿಜ. ಆದರೆ ಈಗೀಗ ಯೋಜನೆ ಆರಂಭವಾಗಿದೆ.

ಶ್ರೀ ಡಿ. ಆರ್. ಕರಿಗೌಡ.—ಸಿಟಿಗಳಿಗೆ ಈ ರೋ ಹೌಸಿಂಗ್ ಗ್ರೂಪ್ ಬಗ್ಗೆ ಎಷ್ಟು ಹಣ ಒದಗಿಸಿದ್ದೀರಿ ?

ಡಾ॥ ಆರ್. ನಾಗನಗೌಡ.—ಸ್ವಲ್ಪ ಹೆಚ್ಚಿಗೆ ಒದಗಿಸಿದ್ದೇವೆ. 35 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಹೌಸಿಂಗ್ ಕಾರ್ಪೊರೇಷನ್ನಿಗೆ ಒಂದಷ್ಟು ಕೊಟ್ಟಿದ್ದೇವೆ.

ಶ್ರೀ ಡಿ. ಆರ್. ಕರಿಗೌಡ.—ಹಳ್ಳಿಗಳಲ್ಲಿ ಹೆಚ್ಚಾಗಿ ಬಡವರು ಇರುವುದರಿಂದ ಅಲ್ಲಿಗೆ ಈ ಮೊಬಲಗನ್ನು ಹೆಚ್ಚಿಗೆ ಒದಗಿಸಬೇಕಾದುದು ಸರ್ಕಾರದವರ ಕರ್ತವ್ಯವಲ್ಲವೇ ?

ಡಾ॥ ಆರ್. ನಾಗನಗೌಡ.—ಆ ವಿಚಾರವನ್ನು ಇನ್ನು ಮುಂದೆ ಆಲೋಚನೆ ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸರ್ಕಾರದವರು ರೂರಲ್ ಪಾರ್ಟ್ಸ್‌ಗಳಿಗೆ ಈ ವಿಚಾರದಲ್ಲಿ ಎಷ್ಟು ಹಣ ಕೊಡಬೇಕೆಂದು ಆಲೋಚನೆ ಮಾಡಿದ್ದೀರಿ ?

ಅಧ್ಯಕ್ಷರು.—2 ಲಕ್ಷ ರೂಪಾಯಿಗಳೆಂದು ಆಗಲೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಮೊಬಲಗನ್ನು ತಾವು ಯಾವಯಾವ ಸೊಸೈಟಿಗಳ ಮೂಲಕ ವಿಲೇವಾರಿ ಮಾಡಲು ಶಿಫಾರ್ಸು ಮಾಡಿದ್ದೀರಿ ?

ಡಾ॥ ಆರ್. ನಾಗನಗೌಡ.—ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಹೌಸ್ ಬಿಲ್ಡಿಂಗ್ ಸೊಸೈಟಿ ಇರುತ್ತದೆ. ಇವುಗಳಿಗೆ ಹಣವನ್ನು ರೂರಲ್ ಹೌಸಿಂಗ್ ಸೊಸೈಟಿ ಸಂಸ್ಥೆ ಮೂಲಕ ವಿಲೇವಾರಿ ಮಾಡಲಾಗುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತಾಲ್ಲೂಕು ಸೊಸೈಟಿಗಳು ಮತ್ತು ರೂರಲ್ ಸೊಸೈಟಿಗಳು ಆಯಾ ಪ್ರದೇಶಕ್ಕೆ ಮಾತ್ರ ಗಮನ ಕೊಟ್ಟು ಬಾಕಿ ಪ್ರದೇಶಕ್ಕೆ ಅವರು ಅಷ್ಟಾಗಿ ಗಮನ ಕೊಡುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಹಾಗೂ ಆಗಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ಸಂಸ್ಥೆಗಳಲ್ಲಿ ಯಾರೂ ಈ ರೂರಲ್ ಪಾರ್ಟಿಗಳ ಪ್ರತಿನಿಧಿಗಳಿಲ್ಲವಲ್ಲವೇ ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಯಾವ ರೂರಲ್ ಸೊಸೈಟಿಗಳನ್ನು ಏರ್ಪಾಡು ಮಾಡಿದ್ದೀರಿ ?

ಡಾ॥ ಆರ್. ನಾಗನಗೌಡ.—ತುಮಕೂರಿನಲ್ಲಿ ಮಾಯಸಂದ್ರ ರೂರಲ್ ಹೌಸಿಂಗ್ ಸೊಸೈಟಿ, ಬಳ್ಳಾರಿಯಲ್ಲಿ ಗೌರೀಪುರ ರೂರಲ್ ಹೌಸಿಂಗ್ ಸೊಸೈಟಿ, ಚಿತ್ರದುರ್ಗದಲ್ಲಿ ಚಿಕ್ಕನಹಳ್ಳಿ ರೂರಲ್ ಹೌಸಿಂಗ್ ಸೊಸೈಟಿ, ಈ ರೀತಿಯಾಗಿ 23 ಸೊಸೈಟಿಗಳು ಇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿ ಕಟ್ಟಡ ಕಟ್ಟುವುದಕ್ಕೆ ಪ್ರತ್ಯೇಕವಾದ ಸೊಸೈಟಿಗಳನ್ನು ಪ್ರಾರಂಭ ಮಾಡುವುದಕ್ಕೆ ಬದಲಾಗಿ, ತಾಲ್ಲೂಕು ಮಲ್ಟಿಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳಿಗೇ ಈ ಕೆಲಸವನ್ನು ವಹಿಸುವುದರಲ್ಲಿ ಸರ್ಕಾರದವರ ಅಭಿಪ್ರಾಯವೇನು ?

ಡಾ॥ ಆರ್. ನಾಗನಗೌಡ.—ಹೌಸ್ ಬಿಲ್ಡಿಂಗ್ ಸೊಸೈಟಿ ಪ್ರತ್ಯೇಕವಾಗಿರಬೇಕೆಂದು ಅಂದುಕೊಂಡಿದ್ದೇವೆ, ಏಕೆಂದರೆ ಇಲ್ಲಿ ಉದ್ಭವಿಸುವ ಸಮಸ್ಯೆಗಳೇ ಬೇರೆ, ಮಲ್ಟಿಪರ್‌ಪಸ್ ಸೊಸೈಟಿಗಳಲ್ಲಿ ನಡೆಯತಕ್ಕ ಕೆಲಸಕಾರ್ಯಗಳೇ ಬೇರೆ. ಸರ್ಕಾರದ ಸೊಸೈಟಿಗಳಲ್ಲಿ ಷಾರ್ಟ್ ಟರ್ಮ್ ಕ್ರೆಡಿಟ್ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ತಾಲ್ಲೂಕು ಸೊಸೈಟಿಗಳಿಗೆ ಮಾರ್ಕೆಟಿಂಗ್ ವರ್ಕ್ ಕೊಟ್ಟಿದ್ದೇವೆ. ಆದ್ದರಿಂದ ಹೌಸ್ ಬಿಲ್ಡಿಂಗ್ ಸೊಸೈಟಿಯೂ ಕೂಡ ಪ್ರತ್ಯೇಕವಾಗಿದ್ದರೇ ಚೆನ್ನ ಎಂದು ಅಭಿಪ್ರಾಯ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾಲ್ಲೂಕು ಮಟ್ಟದಲ್ಲಿ ಈಗಿರತಕ್ಕ ಕೆಲವು ಹೌಸ್ ಬಿಲ್ಡಿಂಗ್ ಸೊಸೈಟಿಗಳಿಗೆ ಗ್ರಾಮಾಂತರ ಪ್ರದೇಶಗಳ ಜ್ಯೂರಿಸ್‌ಡಿಕ್ಷನ್ ಇಲ್ಲದೇ ಇರುವುದರಿಂದ ಅಲ್ಲಿಗೆ ಬೇರೆ ಸೊಸೈಟಿಗಳನ್ನು ಪ್ರಾರಂಭಮಾಡುವುದಕ್ಕೆ ಏರ್ಪಾಡುಮಾಡಬೇಕೆಂದಿದ್ದೀರಾ ?

ಡಾ॥ ಆರ್. ನಾಗನಗೌಡ.—ಈಗ ಗ್ರಾಮಾಂತರ ಗಳಲ್ಲೇ ಈ ಸೊಸೈಟಿಗಳನ್ನು ಪ್ರಾರಂಭಮಾಡಿರುವುದು ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಗ್ರಾಮಾಂತರ ಪ್ರದೇಶಗಳಲ್ಲೆಲ್ಲಾ ಹೊಸದಾಗಿ ಸೊಸೈಟಿಗಳನ್ನು ಪ್ರಾರಂಭಮಾಡಿ, ಕೆಲಸ ನಡೆಸಬೇಕಾದರೆ ಬಹಳ ಕಾಲ ಹಿಡಿಯುವುದಿಲ್ಲವೇ ?

ಡಾ॥ ಆರ್. ನಾಗನಗೌಡ.—ಗ್ರಾಮಾಂತರಗಳಲ್ಲಿ ಸೊಸೈಟಿಗಳು ಪ್ರಾರಂಭವಾಗಿ ಕೆಲಸಮಾಡಲು ಸ್ವಲ್ಪ ಅಲಸ್ಯವಾಗುತ್ತದೆ. ಇತ್ತೀಚೆಗೆ ನಾವು ಕೋ-ಆಪರೇಟಿವ್ ಎಸ್ಟಾಬ್ಲಿಷ್‌ಮೆಂಟ್ ಹೆಚ್ಚು ಮಾಡಿ, ಸೂಪರ್‌ವೈಜರ್‌ಗಳು, ಇನ್‌ಸ್ಪೆಕ್ಟರುಗಳು ಮುಂತಾದವರನ್ನು ನೇಮಕ ಮಾಡಿರುವುದರಿಂದ ಜಾಗ್ರತೆ ಆಗಬಹುದು, ಅಷ್ಟು ಅಲಸ್ಯ ಆಗಲಿಕ್ಕಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆದಷ್ಟು ಜಾಗ್ರತೆ ಈ ಸೊಸೈಟಿಗಳನ್ನು ಪ್ರಾರಂಭಮಾಡಿಸುವುದಕ್ಕೆ ಇಲಾಖೆಯ ಅಧಿಕಾರಿಗಳು ಗಮನ ಕೊಡಬೇಕೆಂದು ತಿಳಿವಳಿಕೆ ಕೊಡುತ್ತೀರಾ ?

ಡಾ॥ ಆರ್. ನಾಗನಗೌಡ.—ಆಗಬಹುದು.

ಶ್ರೀ ಬಿ. ಮಾಧವಾಚಾರ್.—ಅರ್ಬನ್ ಏರಿಯಾದಲ್ಲಿರತಕ್ಕ ಸೊಸೈಟಿಗಳಿಗೇ ರೂರಲ್ ಏರಿಯಾದ ಜ್ಯೂರಿಸ್‌ಡಿಕ್ಷನ್ ಎಕ್ಸ್‌ಟೆಂಡ್ ಮಾಡಬೇಕೆಂದರೆ ಅದು ಬಹಳ ಒಳ್ಳೆಯ ಪ್ರಪೋಸಲ್ ಅಲ್ಲವೇ ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ. ಈಗ ಅಂದುಕೊಂಡಿರುವುದು ಯಾವುದಾದರೂ ನಣ್ಣಗ್ರಾಮಗಳಲ್ಲಿ ಸೊಸೈಟಿ ಮಾಡಿಕೊಳ್ಳುತ್ತೇವೆ ಎಂದರೆ ಉತ್ತೇಜನ ಕೊಡಬೇಕೆಂದು ಇದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸಂಸ್ಥಾನದಲ್ಲಿರತಕ್ಕ ಟೌನ್‌ಗಳಿಗೆ 35 ಲಕ್ಷ ರೂಪಾಯಿ, ಹಳ್ಳಿಗಳಿಗೆ ಕೇವಲ 2 ಲಕ್ಷ ರೂಪಾಯಿ ಸಾಕೇ ?

ಡಾ॥ ಆರ್. ನಾಗನಗೌಡ.—ಇನ್ನು ಮುಂದೆ ಬೇಕಾದರೆ ಜಾಸ್ತಿ ಕೊಡೋಣ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಟೌನ್‌ಗಳಿಗಿಂತ ಗ್ರಾಮಾಂತರಗಳಿಗೆ ಜಾಸ್ತಿ ಹಣಬೇಕು, ಅಲ್ಲಿ ಸರಿಯಾದ ಮನೆಗಳಿಲ್ಲ ಎಂಬುದು ಗೊತ್ತೇ ?

ಡಾ॥ ಆರ್. ನಾಗನಗೌಡ.—ಹಳ್ಳಿಗಳಿಗೆ ಇನ್ನೂ ಹೆಚ್ಚು ಸಹಾಯ ಮುಂದೆ ಕೊಡೋಣ.

ಶ್ರೀ ಶಿವನಂಜೇಗೌಡ.—ರೂರಲ್ ಏರಿಯಾದಲ್ಲಿ ಹೋಬಳಿಗಳಲ್ಲೂ ಕೂಡ ಈ ರೂರಲ್ ಹೌಸಿಂಗ್ ಸೊಸೈಟಿಗಳನ್ನು ಸ್ಥಾಪನೆ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಯಾವಯಾವ ಗ್ರಾಮಗಳವರು ಕೇಳುತ್ತಾರೆಯೋ ಅಲ್ಲೆಲ್ಲಾ ಉತ್ತೇಜನ ಕೊಡುತ್ತೇವೆ.

ಶ್ರೀ ಶಿವನಂಜೇಗೌಡ.—ಹಳ್ಳಿಗಳಿಗೆ 2 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಈ ಲೆಕ್ಕದ ಪ್ರಕಾರ 16 ಸಾವಿರ ಹಳ್ಳಿಗಳಿಗೂ ಕೂಡ ದುಡ್ಡು ಹಂಚಿಕೆ ಆಗಬೇಕಾದರೆ ಎಷ್ಟು ಲಕ್ಷ ರೂಪಾಯಿ ಬೇಕಾಗುತ್ತದೆ ?

ಡಾ॥ ಆರ್. ನಾಗನಗೌಡ.—ಬಹಳ ದುಡ್ಡು ಬೇಕಾಗುತ್ತದೆ.

ಶ್ರೀ ಶಿವನಂಜೇಗೌಡ.—ಈಗ ಸಿಟಿಯಲ್ಲಿ ಕಟ್ಟಿರತಕ್ಕ ಬಂಗಲೆ ಹೇಗಿದೆ, ಹಳ್ಳಿಯಲ್ಲಿ ಕಟ್ಟಿರತಕ್ಕ ಮನೆ ಹೇಗಿದೆ ನೋಡಿ. ತಾರತಮ್ಯ ಹಾಕಿದರೆ ಎಲ್ಲಿಗೆ ದುಡ್ಡು ಹೆಚ್ಚಾಗಿ ಕೊಡಬೇಕು ?

ಡಾ॥ ಆರ್. ನಾಗನಗೌಡ.—ಅಭಿಪ್ರಾಯ ಕೇಳುತ್ತಾರೆ. ಪಟ್ಟಣಗಳಲ್ಲಿ ಸಾಲಮಾಡಿ ಮನೆ ಕಟ್ಟಿರುತ್ತಾರೆ, ಹಳ್ಳಿಗಳಲ್ಲಿ ತಮ್ಮ ಯೋಗ್ಯತೆಯೊಳಗೆ ಮನೆ ಕಟ್ಟಿಕೊಂಡು ಸಾಲಕ್ಕೆ ಈಡಾಗುವುದಿಲ್ಲ.

ಶ್ರೀ ಶಿವನಂಜೇಗೌಡ.—ಹಳ್ಳಿಗಳಲ್ಲಿ ಈಗ ಸಾಲ ಮಾಡಿ ಆಸ್ತಿಪಾಸ್ತಿಗಳನ್ನೆಲ್ಲಾ ಕಳೆದುಕೊಂಡು ಮನೆ ಇಲ್ಲದೇ ಇರತಕ್ಕವರು ತಮ್ಮ ಗಮನದಲ್ಲಲ್ಲವೇ ?

ಡಾ॥ ಆರ್. ನಾಗನಗೌಡ.—ಇಲ್ಲ. ಒಳ್ಳೆ ಮನೆ ಕಟ್ಟಬೇಕೆಂದು ಯಾರು ಹೇಳುತ್ತಾರೋ ಅವರಿಗೆ ಈ ರೂರಲ್ ಸೊಸೈಟಿ ಮುಖಾಂತರ ಸಾಲ ಕೊಡಬೇಕೆಂದು ಈ ಏರ್ಪಾಡು ಮಾಡಿದೆ.

ಶ್ರೀ ಶಿವನಂಜೇಗೌಡ.—ಮೈಸೂರು ಜಿಲ್ಲೆಗೆ ಹೆಚ್ಚು ಹಣ ಒದಗಿಸಿ ಸುಲಭ ದರದಲ್ಲಿ ಮನೆಗಳನ್ನು ಕಟ್ಟಿಸಿ ಕೊಡುವ ಏರ್ಪಾಡು ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಆಲೋಚನೆ ಮಾಡೋಣ.